SET-4

Series ΩQAΩA/C

Q.P. Code **13**

Roll No. | | | | | | | | |

Candidates must write the Q.P. Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **6** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **7** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು.
- Please check that this question paper contains **6** printed pages.
- Q.P. Code given on the right hand side of the question paper should be written on the title page of the answer-book by the candidate.
- Please check that this question paper contains **7** questions.
- **Please write down the serial number of the question in the answer-book before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 2 ಗಂಟೆ* | *ಗರಿಷ್ಠ ಅಂಕಗಳು : 40*

*Time allowed : 2 hours* | *Maximum Marks : 40*

***General Instructions :***

*Read the following instructions carefully and follow :*

*(i)* *This question paper contains* ***A, B*** *and* ***C three*** *(3) sections – Unseen Passage, Grammar, Writing Skill, Essay, Letter/Report/Application Writing and Textbooks.*

*(ii)* *Section* ***A*** *(Unseen Passage) contains two (2) questions. Attempt both questions.*

*(iii)* *Section* ***B*** *(Grammar, Writing Skill) contains five (5) questions, based on specific instructions given in the question itself.*

*(iv)* *Section* ***C*** *(Textbook based – Prose, Poetry, Non-detailed Portion) contains eight (8) questions, based on specific instructions given in the question itself.*

***ಸೂಚನೆಗಳು:***

***ಕೆಳಗೆ ನೀಡಲಾದ ಸೂಚನೆಗಳನ್ನು ಗಮನವಿಟ್ಟು ಓದಿ :***

*(i)* ಪ್ರಶ್ನೆಪತ್ರಿಕೆಯು ***A, B*** ಮತ್ತು ***C*** ಎಂಬ **ಮೂರು** ವಿಭಾಗಗಳನ್ನು ಒಳಗೊಂಡಿದೆ. ವಾಚನ ಮತ್ತು ಗ್ರಹಿಕಾ ಕೌಶಲ್ಯ, ಅನ್ವಯಿಕ ವ್ಯಾಕರಣ, ಬರವಣಿಗೆ ಕೌಶಲ್ಯ ಮತ್ತು ಪಠ್ಯಗಳ ಅಧ್ಯಯನ.

*(ii)* ವಿಭಾಗ ***A*** ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ ಎರಡು ಪ್ರಶ್ನೆಗಳನ್ನು ಕೊಡಲಾಗಿದೆ. ಎರಡು ಪ್ರಶ್ನೆಗಳಿಗೂ ಉತ್ತರಿಸಬೇಕು.

*(iii)* ವಿಭಾಗ ***B*** ಅನ್ವಯಿಕ ವ್ಯಾಕರಣ ಮತ್ತು ಬರವಣಿಗೆ ಕೌಶಲ್ಯ ವಿಭಾಗದಲ್ಲಿರುವ ಐದು ಪ್ರಶ್ನೆಗಳಿಗೆ ಆಯ್ಕೆ ನೋಡಿ ಉತ್ತರಿಸಬೇಕು.

*(iv)* ವಿಭಾಗ ***C*** ಪಠ್ಯಗಳ ಅಧ್ಯಯನ (ಗದ್ಯ, ಪದ್ಯ ಮತ್ತು ಪಠ್ಯಪೂರಕ) ವಿಭಾಗದಲ್ಲಿರುವ ಎಂಟು ಪ್ರಶ್ನೆಗಳಿಗೆ ಆಯ್ಕೆ ನೋಡಿ ಉತ್ತರಿಸಬೇಕು.

## ಭಾಗ – A
## (ವಾಚನ ಮತ್ತು ಗ್ರಹಿಕಾ ಕೌಶಲ) : 4 ಅಂಕಗಳು

**I.** ಈ ಕೆಳಗಿನ ಗದ್ಯಾಂಶವನ್ನು ಓದಿ, ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ :

ಕ್ರೋಧವು ವ್ಯಾಧನಿದ್ದಂತೆ, ಜೀವನದ ಹೂದೋಟವನ್ನು ಸಹ ಅರಣ್ಯವೆಂದು ತಿಳಿದುಕೊಂಡು ಅದು ಹಾಳು ಮಾಡಬಲ್ಲದು. ಹೀಗೆ ಸಿಟ್ಟು ಬಂದಾಗ ರಕ್ತವು ಸುಡುವುದಲ್ಲದೆ, ಜೀವನದ ಎಣ್ಣೆಯೂ ಸುಡುವುದು; ಬತ್ತಿಯೂ ಸಣ್ಣದಾಗುವುದು. ಕ್ರೋಧದಲ್ಲಿ ಎರಡು ತರಗಳನ್ನು ವಿಂಗಡಿಸಬಹುದು, ಒಂದು ಪಿಶಿತನ : ಇನ್ನೊಂದು ಕೊಚ್ಚಿಕೊಂಡು ಬಂದುಹೋಗುವ ಹೊನಲಿನಂತಹ ಪ್ರವಾಹ. ಪಿಶಿತನವು ಮನಸ್ಸಿಗೆ ಬಡಿದುಕೊಂಡ ಪಿಶಾಚಿಯಿದ್ದಂತೆ. ಮನಸ್ಸಿನಲ್ಲಿ ಮನೆಮಾಡಿಕೊಂಡು ಮನಸ್ಸನ್ನೇ ಅದು ದಿನಾಲು ತಿನ್ನುವುದು. ಒಂದು ಕತೆಯಲ್ಲಿ ಹೇಳಿದ ಹಾಗೆ ಗಂಗದತ್ತ ಎಂಬ ಕಪ್ಪೆಯ ಬಾವಿಯಲ್ಲಿ ಇದ್ದ ಪ್ರಿಯದರ್ಶನ ಎಂಬ ಸರ್ಪದಂತೆ ಈ ಪಿಶಿತನವಿದೆ. ಇದನ್ನು ಹೊರಗೆ ಹಾಕಿರಬೇಕೆ ಹೊರತು ಗಂಗದತ್ತನೇ ತನ್ನ ಬಾವಿಯನ್ನು ಬಿಟ್ಟು ಹೋಗಿರಬಾರದು. ಇದಕ್ಕೆ ಒಂದೇ ಹಾದಿಯಿದೆ; ಸಹನೆ ಇಲ್ಲವೆ ತಾಳ್ಮೆ; ನೈಸರ್ಗಿಕ, ಮಾನಸಿಕ ಚಲನದ ಮೇಲೆ ಲಕ್ಷ್ಯಪೂರ್ಣ ಪ್ರಭುತ್ವ – ಈ ಪ್ರಭುತ್ವವು ಅಭ್ಯಾಸಬಲದಿಂದ ಸಾಧ್ಯ. ಮೌನವು ಇದಕ್ಕೆ ಸಹಕಾರಿ; ತಾಳ್ಮೆ – ಮೌನಗಳಿಂದ ಪಿಶಿತನವನ್ನು ಗೆಲ್ಲಬೇಕು.

ಕೊಚ್ಚಿಕೊಂಡು ಬರುವ ಕ್ರೋಧವು ಎಂಥ ಅಣೆಕಟ್ಟನ್ನಾದರೂ ಕೋಡಿವರಿದು ಬರಬಲ್ಲದು. ಇದು ಬರಿದಾಗ ಸಮುದ್ರದಲ್ಲಿಯ ತರಂಗವು ಸಮುದ್ರದಲ್ಲಿಯೇ ಲೀನವಾಗುವಂತೆ, ಚಿತ್ತದಲ್ಲಿ ಹುಟ್ಟಿದ ಅದು ಚಿತ್ತದಲ್ಲಿಯೇ ಲೀನವಾಗುವಂತೆ ನೋಡಿಕೊಳ್ಳಬೇಕು.

ಒಮ್ಮೊಮ್ಮೆ ದೈನಂದಿನ ವ್ಯವಹಾರದಲ್ಲಿ ಸಿಟ್ಟು ಅಗತ್ಯವೆಂದು ತೋರಬಹುದು. ಆಳು ಹದಗೇಡಿಯಾದರೆ, ಮಗು ಗೊಂದಲ ಹಾಕಿದರೆ, ಕೈಕೆಳಗಿನವರು ಕರ್ತವ್ಯವನ್ನು ದುರ್ಲಕ್ಷಿಸಿದರೆ – ಸಿಟ್ಟಾಗಬೇಕಾಗುತ್ತದೆ. ಆದರೆ ಸಿಟ್ಟಾಗುವುದು ಬೇರೆ ಹಾಗೂ ಆಗಬೇಕಾದುದು ಬೇರೆ ಎಂಬುದನ್ನು ನಾವು ನೆನೆಯಬೇಕು; ಅದೊಂದು ಪಾತ್ರವನ್ನು ವಹಿಸಿದಂತೆ, ಲಿಯರ್ ರಾಜನ ನಟನ ಕ್ರೋಧಾವೇಶ ಆ ನಟನದಲ್ಲವಷ್ಟೇ ? ನಾವು ಲಿಯರ್ ಆಗಬಾರದು. ಲಿಯರ್ ರಾಜನ ಪಾತ್ರವನ್ನು ವಹಿಸಿದ ನಟರಾಗಬೇಕು.

**ಪ್ರಶ್ನೆಗಳು :**

**1.** ಪಿಶಿತನವನ್ನು ಲೇಖಕರು ಹೇಗೆ ವಿವರಿಸಿದ್ದಾರೆ ? *2*

**2.** ಯಾವ ಸಂದರ್ಭಗಳಲ್ಲಿ ಸಿಟ್ಟು ಬರುತ್ತದೆ ? *2*

## ಭಾಗ – B

## ಅನ್ವಯಿಕ ವ್ಯಾಕರಣ : (4 ಅಂಕಗಳು)

**II.** ಈ ಕೆಳಗಿನ ಸೂಚನೆಯಂತೆ ಬರೆಯಿರಿ.

**3.** ಗಾದೆಯ ಮಾತನ್ನು ವಿಸ್ತರಿಸಿ ಬರೆಯಿರಿ : 2

ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು

**ಅಥವಾ**

ದುಡಿಮೆಯೇ ದುಡ್ಡಿನ ತಾಯಿ

**4.** ಈ ಕೆಳಗಿನ ವಾಕ್ಯದಲ್ಲಿರುವ ಎರಡು ವಿಧ್ಯರ್ಥಕ ಮತ್ತು ಎರಡು ಸಂಭವನಾರ್ಥಕ ಪದಗಳನ್ನು ಬರೆಯಿರಿ : *2*

ಉತ್ತಮ ಪುಸ್ತಕಗಳನ್ನು ಓದಿ ತಿಳಿಯೋಣ, ಸತ್ಕಾರ್ಯ ಮಾಡೋಣ ಎಂದು ಒಬ್ಬ ಹೇಳಿದರೆ ಇನ್ನೊಬ್ಬ ಇದರಿಂದ ಏನಾದೀತು, ಹೋದೀತು ಎನ್ನಬೇಕೆ ? ಅದು ಹಾಗಲ್ಲ, ಇಲ್ಲಿ ಸಕಲರಿಗೆ ಒಳ್ಳೆಯದಾಗಲಿ ಎಂಬ ಆಶಯವಿದೆ.

**III.** ಬರವಣಿಗೆ ಕೌಶಲ : 12 ಅಂಕಗಳು

**5.** ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಂಡು ಪ್ರಬಂಧ ಬರೆಯಿರಿ : *4*

(a) ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತ ಸಾಧನೆ

(b) ಕೋರೊನಾ ಕಲಿಸಿದ ಪಾಠಗಳು

(c) ವಾಹನ ದಟ್ಟನೆ

**6.** (a) ಪುಸ್ತಕ ಸಪ್ತಾಹದ ಅಂಗವಾಗಿ ನಿಮ್ಮ ಜಿಲ್ಲಾ ಕೇಂದ್ರದಲ್ಲಿ 'ಪುಸ್ತಕ ಪ್ರದರ್ಶನ ಮತ್ತು ಮಾರಾಟ' ಏರ್ಪಡಿಸಲು ವಿನಂತಿಸಿಕೊಂಡು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆಯಿರಿ. *4*

**ಅಥವಾ**

(b) ದಿನಾಂಕ 26.2.2022 ರ ಕನ್ನಡ ಪ್ರಭ ದಿನಪತ್ರಿಕೆಯ ಜಾಹೀರಾತಿನ ಮೇರೆಗೆ, ಜನರಲ್ ಕಾರ್ಯಪ್ಪ ವಸತಿ ಶಾಲೆ, ಹಾಸನ ಇಲ್ಲಿ ಖಾಲಿ ಇರುವ ಕನ್ನಡ ಶಿಕ್ಷಕ ಹುದ್ದೆಗೆ ಅರ್ಜಿ ಸಲ್ಲಿಸಿ.

**7.** ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವದ ಬಗೆಗೆ ಒಂದು ವರದಿಯನ್ನು ತಯಾರಿಸಿ. *4*

## ಭಾಗ – C

## ಪದ್ಯಗಳ ಅಧ್ಯಯನ (20 ಅಂಕಗಳು)

**IV.** ಈ ಕೆಳಗಿನ ಪ್ರಶ್ನೆಗಳಿಗೆ ಎರಡು/ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. *2×3=6*

**8.** ನೆಹರು ಅವರು ವಿಶ್ವೇಶ್ವರಯ್ಯ ಅವರ ಬಗೆಗೆ ಏನೆಂದು ಹೇಳಿದ್ದಾರೆ ?

**9.** ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?

**10.** ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸಿರು ಕಾಣುತ್ತಿದೆ ?

**V.** ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ. *2×3=6*

**11.** (a) ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು

**ಅಥವಾ**

(b) ಹುಸಿಯದ ಬೇಹಾರಿಯೇ ಇಲ್ಲ

**12.** (a) ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್

**ಅಥವಾ**

(b) ಅರಸುಗಳ ವಾಜಿಯಂ ಬಿಡು

**VI.** ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ. *2×2=4*

**13.** ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು ?

**14.** ಬಡತನ, ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ ?

**VII.** ಈ ಕೆಳಗಿನ ಪ್ರಶ್ನೆಗಳಿಗೆ ಸುಮಾರು ಹತ್ತು ವಾಕ್ಯಗಳಲ್ಲಿ ಉತ್ತರಿಸಿ. *1×4=4*

**15.** (a) ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

**ಅಥವಾ**

(b) ಲವನ ನಡವಳಿಕೆ ಇಷ್ಟವಾಯಿತೇ ? ಏಕೆ ?